**ಸಾಕ್ಷಿಯನ್ನು ದಿನಾಂಕಃ17–07–2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಶ್ರೀಃ ಎಸ್.ಎಸ್.ಡಿ, ಎದುರುದಾರ ಪರ ವಕೀಲರಿಂದಃ**

4. ದಾವಾ ಆಸ್ತಿಯಲ್ಲಿ ಪೂರ್ವದಲ್ಲಿ ಒಂದು ಮನೆ ಇತ್ತು. ಸದರಿ ಮನೆಯ ಮನೆ ಸಂಖ್ಯೆಯು ನನಗೆ ತಿಳಿದಿರುವುದಿಲ್ಲ. ಸದರಿ ಮನೆಯ ತೆರಿಗೆಯನ್ನು ಯಾರು ಪಾವತಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯ ತೆರಿಗೆಯನ್ನು ಪೂರ್ವದಲ್ಲಿ ಚೈಯಬ್ಬ ಬ್ಯಾರಿಯವರು ಪಾವತಿಸುತ್ತಿದ್ದರು ಮತ್ತು ಅವರ ಮರಣಾನಂತರ ಅವರ ಮಕ್ಕಳು ಪಾವತಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಚೈಯಬ್ಬ ಬ್ಯಾರಿಯವರು ಮತ್ತು ಅವರ ಮಕ್ಕಳು ವಾಸಮಾಡಿಕೊಂಡಿದ್ದ ಬಗ್ಗೆ ನಿಮಗೆ ತಿಳಿದಿದೆಯೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಯಾರು ವಾಸಮಾಡಿಕೊಂಡಿದ್ದರು ಎಂದು ನೀವು ತಿಳಿದುಕೊಂಡಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ತಿಳಿದ ಹಾಗೆ ಸದರಿ ಮನೆಯಲ್ಲಿ ಯಾರು ಕೂಡ ವಾಸಮಾಡಿಕೊಂಡಿರಲಿಲ್ಲ ಎಂದು ನುಡಿಯುತ್ತಾರೆ.

5. ಸದರಿ ಮನೆಯು ಇದ್ದಂತಹ ಸ್ಥಳದಲ್ಲಿ ಹಾಲಿ ಸಿದ್ಧಿಕ್ ರವರು ಒಂದು ಮನೆಯನ್ನು ನಿರ್ಮಿಸಿಕೊಂಡಿರುತ್ತಾರೆ ಎಂದರೆ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ನಿಮ್ಮ ತಂದೆಯವರು ಚೈಯಬ್ಬ ಬ್ಯಾರಿಯವರಿಗೆ ಮಾರಾಟ ಮಾಡಿದ ಸ್ಥಳದ ಕ್ರಯಪತ್ರವಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಿಡಿ–1 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಿ ಸದರಿ ದಾಖಲಾತಿಯು ನಿಮ್ಮ ಅಜ್ಜನವರು ಖರೀದಿಸಿದ ಆಸ್ತಿಯ ಕ್ರಯಪತ್ರವಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು.

6. ನಮ್ಮ ಅಜ್ಜನವರು ನಿಡಿ-2 ರಂತೆ ಕಲ್ಲಬೆಟ್ಟು ಗ್ರಾಮದ ಸರ್ವೇ ನಂ. 177/1 ಬಿ ರಲ್ಲಿ ಆಸ್ತಿಯನ್ನು ಖರೀದಿಸಿರುತ್ತಾರೆ. ನಿಮ್ಮ ಅಜ್ಜನವರು ಸರ್ವೇ ನಂ. 177/1 ಬಿ ನ್ನು ಚೈಯಬ್ಬ ಬ್ಯಾರಿಯವರಿಗೆ ಮಾರಾಟ ಮಾಡಿದ ಆಸ್ತಿಯ ಸರ್ವೇ ನಂಬರಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಸರ್ವೇ ನಂಬರನ್ನು ನಿಡಿ-1 ರಲ್ಲಿ ಕಡಿತಗೊಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಸರ್ವೇ ನಂ. 177/1 ಬಿ ಎಂದು ಬರೆದು 25 ಸೆಂಟ್ಸ್ ಎಂದು ಪೂರ್ವದಲ್ಲಿ ಬರೆಯಲಾಗಿ, ಅದನ್ನು ಕಡಿತಗೊಳಿಸಿ 90 ಸೆಂಟ್ಸ್ ಎಂದು ಬರೆಯಲಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ನಿಮ್ಮ ಅಜ್ಜನವರು ಚೈಯಬ್ಬ ಬ್ಯಾರಿಯವರಿಗೆ 25 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿರುತ್ತಾರೆಯೋ ಅಥವಾ 90 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿರುತ್ತಾರೆಯೋ ಎಂದು ದಾವೆಯಲ್ಲಿ ಹೇಳುತ್ತಿದ್ದಿರೋ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ರಂತೆ ಸರ್ವೇ ನಂ. 177/1 ಬಿ ರಲ್ಲಿ 90 ಸೆಂಟ್ಸ್ ಜಾಗವನ್ನು ಮಾರಾಟ ಮಾಡಿರುವುದಾಗಿ ಕಂಡು ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

7. ಅದೇ ರೀತಿ ನಿಡಿ-1 ರಲ್ಲಿ ಸರ್ವೇ ನಂ. 177/2 ರಲ್ಲಿ 48 ಸೆಂಟ್ಸ್ ಎಂದು ನಮೂದಿಸಿ ಅದನ್ನು ಕಡಿತಗೊಳಿಸಿದ್ದಾಗಿ ಕಂಡು ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಸರ್ವೇ ನಂ. 177/1 ಬಿ ರಲ್ಲಿ 25 ಸೆಂಟ್ಸ್‌ನ್ನು ಕಡಿತ ಗೊಳಿಸಿ 90 ಸೆಂಟ್ಸ್ ಎಂದು ನಮೂದಿಸಿದ್ದು ಮತ್ತು ಸರ್ವೇ ನಂ. 177/2 ರಲ್ಲಿ 48 ಸೆಂಟ್ಸ್ ಎಂದು ನಮೂದಿಸಿ ಕಡಿತಗೊಳಿಸಿದ ಬಗ್ಗೆ ಏನು ಕಾರಣ ಎಂದು ನೀವು ತಿಳಿದುಕೊಂಡಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ತಿಳಿದುಕೊಂಡಿರುವುದಿಲ್ಲ, ಆದರೆ ದಾಖಲಾತಿಯಲ್ಲಿ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ನಾನು 2008 ನೇ ಸಾಲಿನಲ್ಲಿ ನಿಡಿ-1 ನ್ನು ಮೊದಲ ಬಾರಿಗೆ ನೋಡಿರುತ್ತೇನೆ.

8. ಪೀಟರ್ ಸಿಕ್ವೇರಾ ರವರ ಮಕ್ಕಳಿಗೆ ನಿಡಿ-1 ರಲ್ಲಿ ಯಾವ ಕಾರಣಕ್ಕೆ ಸದರಿ ಕಡಿತಗಳನ್ನು ತೋರಿಸಿರುತ್ತಾರೆ ಎಂಬ ಬಗ್ಗೆ ಮಾಹಿತಿ ಇದೆಯೋ ಎಂಬ ಪ್ರಶ್ನೆಗೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂ. 177/1 ಬಿ ರಲ್ಲಿ 90 ಸೆಂಟ್ಸ್ ಜಾಗ ಎಲ್ಲಿ ಬರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೇ ನಂ. 177/1 ಬಿ ರಲ್ಲಿ 90 ಸೆಂಟ್ಸ್ ಜಾಗ ಎಲ್ಲಿ ಬರುತ್ತದೆ ಎಂಬ ಬಗ್ಗೆ ಪೀಟರ್ ಸಿಕ್ವೇರಾ ರವರ ಮಕ್ಕಳಿಗೆ ತಿಳಿದಿರುತ್ತದೆಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. 2008 ನೇ ಸಾಲಿನಲ್ಲಿ ನಿಮಗೆ ನಿಡಿ-1 ರ ಬಗ್ಗೆ ತಿಳಿದ ನಂತರ ನೀವು ಏನಾದರೂ ಪೀಟರ್ ಸಿಕ್ವೇರಾ ರವರ ಮಕ್ಕಳಲ್ಲಿ ಸರ್ವೇ ನಂ. 177/1 ಬಿ ರಲ್ಲಿ 90 ಸೆಂಟ್ಸ್ ಜಾಗ ಎಲ್ಲಿ ಬರುತ್ತದೆ ಎಂದು ನೀವು ಕೇಳಿ ತಿಳಿದುಕೊಂಡಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.

177/1 ಬಿ ರಲ್ಲಿ 90 ಸೆಂಟ್ಸ್ ಸ್ಥಳಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನೀವು ನೋಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

9. ಹಳೆಯ ಕಾಲದಲ್ಲಿ ದಾಖಲಾತಿಗಳಲ್ಲಿ ವಿಸ್ತೀರ್ಣ ಕಡಿಮೆ ಇದ್ದು , ಸ್ವಾಧೀನದಲ್ಲಿ ವಿಸ್ತೀರ್ಣ ಹೆಚ್ಚು ಇದ್ದ ಕಾರಣ ನಿಡಿ–1 ರಲ್ಲಿ ಸರ್ವೇ ನಂ. 177/2 ರಲ್ಲಿ 48 ಸೆಂಟ್ಸ್ ಜಾಗವನ್ನು ಕಡಿತಗೊಳಿಸಿ ಸರ್ವೇ ನಂ. 177/1 ಬಿ ರಲ್ಲಿ 90 ಸೆಂಟ್ಸ್ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ. 177/1 ಬಿ ರಲ್ಲಿ ಇರುವ 90 ಸೆಂಟ್ಸ್ ಸ್ಥಳವೆಂದರೆ ಸರ್ವೇ ನಂ. 177/2 ರಲ್ಲಿ 48 ಸೆಂಟ್ಸ್ ಸ್ಥಳ ಮತ್ತು ಸರ್ವೇ ನಂ. 177/1 ಬಿ ರಲ್ಲಿ 25 ಸೆಂಟ್ಸ್ ಸ್ಥಳ ಒಟ್ಟು ಸೇರಿ ಆಗಿರುತ್ತದೆ ಎಂದರೆ ಸರಿಯಲ್ಲ. ಎರಡೂ ಸರ್ವೇ ನಂಬರಿನಲ್ಲಿ ಇರುವ ಸ್ಥಳಗಳನ್ನು ಒಟ್ಟು ಸೇರಿಸಿ ಮತ್ತು ಸ್ವಾಧೀನದಲ್ಲಿ ಹೆಚ್ಚು ಸ್ಥಳವಿದ್ದ ಕಾರಣ ಸರ್ವೇ ನಂ. 177/1 ಬಿ ರಲ್ಲಿ 90 ಸೆಂಟ್ಸ್ ವೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತಹ ವಿಚಾರಗಳೆಲ್ಲವೂ ಪೀಟರ್ ಸಿಕ್ವೇರಾ ರವರಿಗೂ ಮತ್ತು ಅವರ ಮಕ್ಕಳಿಗೂ ತಿಳಿದಿತ್ತು ಎಂದರೆ ನನಗೆ ಗೊತ್ತಿಲ್ಲ.

10. ದಾವಾ ಆಸ್ತಿಯನ್ನು ಹೊರತು ಪಡಿಸಿ ಉಳಿದ ಆಸ್ತಿಗಳನ್ನೆಲಾ ಪೀಟರ್ ಸಿಕ್ವೇರಾ ರವರ ಮಕ್ಕಳ ನಡುವೆ ಪಾಲಾಗಿ ದಾಖಲಾತಿಯಾಗಿರುತ್ತದೆ ಮತ್ತು ಅವರ ಮಕ್ಕಳ ಹೆಸರಿಗೆ ಪಹಣಿ ಪತ್ರಿಕೆಗಳು ಅಸ್ತಿತ್ವದಲ್ಲಿ ಇರುತ್ತದೆ. ಪೀಟರ್ ಸಿಕ್ವೇರಾ ರವರ ಮಕ್ಕಳ ಹೆಸರಿನಲ್ಲಿ ಇರುವ ಪಹಣಿಗಳೆಲ್ಲವೂ ಯಾವುದೂ ಕೂಡ ಜಂಟಿ ಹಕ್ಕಿನಲ್ಲಿ ಇರುವುದಿಲ್ಲ ಎಲ್ಲವೂ

ಅವರ ಪ್ರತ್ಯೇಕ ಹಕ್ಕಿನಲ್ಲಿ ಇರುವ ಪಹಣಿಗಳಾಗಿರುತ್ತವೆ. ದಾವಾ ಆಸ್ತಿಯನ್ನು ನಿಮ್ಮ ಅಜ್ಜನವರು ಚೈಯಬ್ಬ ಬ್ಯಾರಿಯವರಿಗೆ ಮಾರಾಟ ಮಾಡಿದ್ದು ಸದರಿ ಆಸ್ತಿಯನ್ನು ಚೈಯಬ್ಬ ಬ್ಯಾರಿಯವರ ಸ್ವಾಧೀನದಲ್ಲಿಯೇ ಅವರು ಖರೀದಿಸಿದ ದಿನದಿಂದ ಇರುವುದರಿಂದ ಮತ್ತು ಪೀಟರ್ ಸಿಕ್ವೇರಾ ಮಕ್ಕಳಿಗೆ ಹಕ್ಕು ಇರುವುದಿಲ್ಲ ತಿಳಿದಿದ್ದರಿಂದ ಪೀಟರ್ ಸಿಕ್ವೇರಾರವರ ಮಕ್ಕಳ ನಡುವೆ ದಾವಾ ಆಸ್ತಿಗಳು ಪಾಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಪೀಟರ್ ಸಿಕ್ವೇರಾ ರವರ ಮಕ್ಕಳು ಈ ದಿನದವರೆಗೂ ಪ್ರತಿವಾದಿಗಳ ದಾವಾ ಆಸ್ತಿಯ ಮೇಲೆ ಇರುವ ಸ್ವಾಧೀನದಲ್ಲಿ ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚೈಯಬ್ಬ ಬ್ಯಾರಿಯವರು ಮತ್ತು ಪೀಟರ್ ಸಿಕ್ವೇರಾ ರವರು ಆತ್ಮೀಯರಾಗಿದ್ದರು ಮತ್ತು ಅವರ ಮರಣಾನಂತರ ಅವರವರ ಮಕ್ಕಳೂ ಆತ್ಮೀಯರಾಗಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

11. ನೀವು ಸುಮಾರು 15 ವರ್ಷಗಳಿಂದ ಹಲವಾರು ಪ್ರಕರಣಗಳಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಿದ್ದರಿಂದ ನಿಮಗೆ ನ್ಯಾಯಾಲಯದ ಕಲಾಪಗಳಲ್ಲಿ ಅನುಭವವಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ನೀಡಲಾಗಿರುತ್ತದೆ ಎಂದು ಹೇಳಿದ ಮುಕ್ತ್ಯಾರು ನಾಮೆಯಲ್ಲಿ ಪ್ರತಿವಾದಿಗಳ ವಿರುದ್ಧ ದೂರು ದಾಖಲಿಸಲು ನಿಖರವಾಗಿ ನಮೂದಿಸಲಾಗಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

12. ಸರ್ವೇ ನಂ. 177/1 ಬಿ ಹಾಲಿ ಸರ್ವೇ ನಂ. 177/5 ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ಸರ್ವೇ ನಂ. 177/2 ಹಾಲಿ ಸರ್ವೇ ನಂ. 177/6 ಎಂದು ಆಗಿರುತ್ತದೆ. ಪ್ರತಿವಾದಿಗಳು ದಾವಾ ಆಸ್ತಿಯನ್ನು ನಿಮ್ಮ ಅಜ್ಜನವರಿಂದ ಖರೀದಿಸಿದ್ದು, ಕೆಲವು ತಾಂತ್ರಿಕ ಕಾರಣದಿಂದ ಪಹಣಿಯು ಅವರ ಹೆಸರಿಗೆ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ.

13. ನೀವು ಪೊಲೀಸ್ ಠಾಣೆಯಲ್ಲಿ ಒಂದು ದೂರನ್ನು ನೀಡಿರುತ್ತೀರಿ ಎಂದು ಹೇಳಿದ್ದು, ಸದರಿ ದೂರನ್ನು ನೀವು ಯಾರ ವಿರುದ್ಧ ದಾಖಲಿಸಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಉಮರಬ್ಬ , ಹಸನಬ್ಬ , ಸಿದ್ಧಿಕ್ ಮತ್ತು ಮೈಯದಿ. ದಾವಾ ಆಸ್ತಿಗೆ ತಾಗಿಕೊಂಡು ಪೀಟರ್ ಸಿಕ್ವೇರಾರವರ ಆಸ್ತಿಗಳೂ ಕೂಡ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೀಟರ್ ಸಿಕ್ವೇರಾ ರವರ ಆಸ್ತಿಗಳಲ್ಲಿ ಗಿಡ–ಮರಗಳನ್ನು ನೆಟ್ಟು ಕೃಷಿ ಚಟುವಟಿಕೆಗಳು ನಡೆಯುತ್ತಿರುತ್ತದೆ. ಪೀಟರ್ ಸಿಕ್ವೇರಾ ರವರ ಆಸ್ತಿಗಳ ಕೃಷಿ ಮತ್ತು ಅವರ ಮಕ್ಕಳ ಆಸ್ತಿಗಳನ್ನೆಲಾ ಪೀಟರ್ ಸಿಕ್ವೇರಾ ರವರ ಮಗ ಹೆನ್ರಿ ಸಿಕ್ವೇರಾ ರವರು ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

14. ಹೆನ್ರಿ ಸಿಕ್ವೇರಾ ರವರ ಮತ್ತು ಪ್ರತಿವಾದಿಯರ ಕುಟುಂಬಸ್ಥರು ಅನ್ಯೋನ್ಯವಾಗಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹೆನ್ರಿ ಸಿಕ್ವೇರಾ ರವರು ಈ ದಿನದವರೆಗೆ ಪ್ರತಿವಾದಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರಾಗಲೀ, ದಾವೆಯಾಗಲಿ ನೀಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ಪೀಟರ್ ಸಿಕ್ವೇರಾರವರ ಮಗ ಹೆನ್ರಿ ಸಿಕ್ವೇರಾ ರವರ ಸ್ವಾಧೀನದಲ್ಲಿ ರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲಿಸಿದ ವಿಷಯವು ಪೀಟರ್ ಸಿಕ್ವೇರಾ ರವರ ಮಕ್ಕಳಿಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪೀಟರ್ ಸಿಕ್ವೇರಾನ ಮಕ್ಕಳಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–1 ರಂತೆ ಪೀಟರ್ ಸಿಕ್ವೇರಾ ರವರು ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ಬೈಯಬ್ಬ ಬ್ಯಾರಿಯವರು ಮತ್ತು ಅವರ ಮಕ್ಕಳು ಸ್ವಾಧೀನ ಅನುಭವಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ಸಿದ್ಧಿಕ್ ರವರು ದಾವಾ ಆಸ್ತಿಯನ್ನು ಮನೆಯನ್ನು ನಿರ್ಮಿಸಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಪೀಟರ್ ಸಿಕ್ವೇರಾ ರವರ ಮಕ್ಕಳಿಗೆ ತಿಳಿದಿದ್ದರಿಂದ ಅವರು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯಲು ಸಾಧ್ಯವಾಗುವುದಿಲ್ಲ ಎಂದು ಹೇಳಿ ಈ ದಾವೆಯಲ್ಲಿ ಅವರು ಹಾಜರಾಗಿರುವುದಿಲ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಯಲ್ಲಿ ತಾಂತ್ರಿಕ ದೋಷದಿಂದ ಹೆಸರು ವರ್ಗಾವಣೆಯಾಗದ ಕಾರಣವನ್ನು ಇಟ್ಟುಕೊಂಡು ನೀವು ಹಲವಾರು ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯದ ಕಲಾಪದಲ್ಲಿ ಅನುಭವವಿರುವುದರಿಂದ ಈ ದಾವೆಯನ್ನು ದಾಖಲಿಸಿ , ಹಾಜರಾಗಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ . ಪ್ರತಿವಾದಿಗಳು ನ್ಯಾಯಾಲಯದ ಯಾವುದೇ ಆದೇಶವನ್ನು ಉಲ್ಲಂಘಿಸಿರುವುದಿಲ್ಲ ಆದರೆ ಅವರು ಉಲ್ಲಂಘಿಸಿರುತ್ತಾರೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಧನೆ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>**ಮಿಸ್ ನಂ. 1/2020, ಪಿಡಬ್ಲ್ಯೂ-1**</u>

**(ಮರುವಿಚಾರಣೆ ಇಲ್ಲ.)**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/–

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ